
# 12-08-2026


VIDYAVARDHAKA SANGHA®, MYSURU
VIDYAVARDHAKA FIRST GRADE COLLEGE
Sheshadri Iyer Road, Mysuru-570001
Library and Information Centre
Celebrates National Librarian's Day
&
Special Lecture on
"How to Inculcate Reading Habit"
Resource Person
Dr. Chandrashekara M.
Senior Professor
DoS in Library and Information Science
University of Mysore, Mysuru.
DATE: 12-08-2026 | TIME: 11.30 AM | VENUE: SRI.P.M.CHIKKABORAIAH HALL
ALL ARE CORDIALLY INVITED

**ಪುಸ್ತಕಗಳು ಬೌದ್ಧಿಕ ಮಟ್ಟವನ್ನು ವೃದ್ಧಿಸುವ ಜೊತೆಗೆ ಕ್ರಿಯಾಶೀಲತೆಯನ್ನು ಬೆಳೆಸುತ್ತವೆ**

**- ಡಾ.ಚಂದ್ರಶೇಖರ ಎಂ**

ಜಗತ್ತಿನ ಸಾಧಕರ ಜೀವನ ಚರಿತ್ರೆಯನ್ನು ಓದುವುದರ ಮೂಲಕ ಜ್ಞಾನವನ್ನು ಅರಿಯಲು ಪುಸ್ತಕಗಳು ಸಹಕಾರಿಯಾಗಿವೆ. ಆ ಜ್ಞಾನದ ಮೂಲಕ ಸಹೃದಯರು ಬದುಕನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ವಿಜ್ಞಾನ ಅಧ್ಯಯನ ಕೇಂದ್ರದ ಹಿರಿಯ ಪ್ರಾಧ್ಯಾಪಕ ಡಾ.ಚಂದ್ರಶೇಖರ ಎಂ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವು ಆಯೋಜಿಸಿದ್ದ ಪದ್ಮಶ್ರೀ ಡಾ.ಎಸ್.ಆರ್.ರಂಗನಾಥನ್ ಅವರ ೧೩೧ನೇ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ಗ್ರಂಥಪಾಲಕ ದಿನಾಚರಣೆಯ ಪ್ರಯುಕ್ತ “ಓದುವ ಹವ್ಯಾಸವನ್ನು ರೂಢಿಸಿಕೊಳ್ಳುವ ಬಗೆ ಹೇಗೆ” ಎಂಬ ವಿಷಯದ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಪದ್ಮಶ್ರೀ ಡಾ.ಎಸ್.ಆರ್ ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು. ಓದಿನಲ್ಲಿ ಹಲವಾರು ಬಗೆಗಳಿವೆ. ಶೈಕ್ಷಣಿಕ ಓದು, ಮನರಂಜನೆಗಾಗಿ ಓದುವುದು, ವೃತ್ತಿಪರ ಓದು ಹೀಗೆ ಹಲವಾರು ಬಗೆಗಳಿದ್ದು ಸಹೃದಯರಲ್ಲಿ ಬೌದ್ಧಿಕ ಮಟ್ಟವನ್ನು ವೃದ್ಧಿಸುವುದರ ಜೊತೆಗೆ ಕ್ರಿಯಾಶಿಲತೆಯನ್ನು ಬೆಳೆಸುತ್ತವೆ. ಓದಿನ ಇತಿಹಾಸವನ್ನು ನೆನೆಯುವುದಾದರೆ ಪ್ರಾಚೀನ ಕಾಲದಲ್ಲಿ ಹಸುವಿನ ಚರ್ಮದ ಮೇಲೆ, ಮರದ ತೊಗಟೆಯಲ್ಲಿ, ಜೇಡಿ ಮಣ್ಣು, ಸುಟ್ಟ ಇಟ್ಟಿಗೆಯಲ್ಲಿ ಬರೆಯುತ್ತಿದ್ದರು. ಇಂದಿನ ಕಾಲದಲ್ಲಿ ಅಚ್ಚು ತಂತ್ರಜ್ಞಾನದ ಪ್ರಗತಿಯಿಂದ ಹಾಳೆಗಳ ಮೂಲಕ ಬರೆಯುವ್ ಹಾಗೂ ಓದುವ ಹವ್ಯಾಸ  ಮಾಡಲಾಗುತ್ತಿದೆ. ಇಂತಹ ಅನುಕೂಲತೆಗಾಗಿ ಪುಸ್ತಕಗಳು ಬೇಕು. ಪುಸ್ತಕಗಳು ಗ್ರಂಥಾಲಯಗಳಲ್ಲಿ ಲಭ್ಯವಿದ್ದು, ಇಲ್ಲಿ ಲಭ್ಯವಿರುವ ಪುಸ್ತಕಗಳು ಪ್ರತ್ಯೇಕವಾಗಿರುವುದರಿಂದ ಸಹೃದಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೂಕ್ತ ಪುಸ್ತಕಗಳು ಕಡಿಮೆ ಸಮಯದಲ್ಲಿ ಅಗಾಧವಾಗಿ ದೊರೆಯುತ್ತವೆ. ಓದುವ ಹವ್ಯಾಸದಿಂದ ವಿದ್ಯಾರ್ಥಿಗಳು ಬದುಕನ್ನು ಕಟ್ಟಿಕೊಳ್ಳಲು ಸಹಾಯವಾಗುತ್ತದೆ. ಗ್ರಂಥಾಲಯಗಳಲ್ಲಿ ಲಭ್ಯವಿರುವ ನಿಯತಕಾಲಿಕೆಗಳು ಮೌಲ್ಯಯುತವಾದವು, ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ನಿಯಮಿತವಾಗಿ ಭೇಟಿನೀಡಿ ಅಧ್ಯಯನ ಮಾಡುವುದು ಉಪಯುಕ್ತವಾದುದು.

ಗ್ರಂಥಪಾಲಕ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅಧ್ಯಕ್ಷೀಯ ನುಡಿ ನುಡಿದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ತಾವು ಮೈಸೂರು ಮಾನಸಗಂಗೋತ್ರಿಯ ವಿಶಾಲವಾದ ಗ್ರಂಥಾಲಯವನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಜನೆ ಗಳಿಸಿಕೊಂಡ ಬಗೆಯನ್ನು ಕಾಲೇಜಿನ ವಿದ್ಯಾರ್ಥಿಗಳಿಗೆ ತಿಳಿಸುತ್ತಾ ಗ್ರಂಥಾಲಯಗಳಲ್ಲಿ ಪಠ್ಯಪುಸ್ತಕ ವಿಭಾಗ, ಅಧ್ಯಯನ ವಿಭಾಗವೆಂಬ ಹಲವಾರು ವಿಭಾಗಗಳಿರುತ್ತವೆ ಎಂಬ ಪರಿಕಲ್ಪನೆ ಬಂದಿದ್ದೇ ಗ್ರಂಥಾಲಯಕ್ಕೆ ಭೇಟಿನೀಡಿದಾಗ ಎಂದು ತಮ್ಮ ವಿದ್ಯಾರ್ಥಿ ಜೀವನವನ್ನು ನೆನೆದರು. ಓದುವುದು ಎಲ್ಲರಿಗು ಗೊತ್ತು ಆದರೆ ಓದುವ ಹವ್ಯಾಸವನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬುದನ್ನು ತಿಳಿಯಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡುತ್ತಾ ಪ್ರಸ್ತುತ ಈ ಕಾರ್ಯಕ್ರಮವು ಯಶಸ್ವಿಯಾಗಲಿ ಎಂದು ಹಾರೈಸಿದರು.

ಕು.ಧಾತ್ರಿ ಪ್ರಾರ್ಥಿಸಿದ ಕಾರ್ಯಕ್ರಮವನ್ನು ಶ್ರೀಮತಿ ಸೌಮ್ಯ ನಿರೂಪಿಸಿದರು.  ವಿದ್ಯಾರ್ಥಿಗಳು, ಗ್ರಂಥಾಲಯ ಸಿಬ್ಬಂದಿ, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಭಾಗವಹಿಸಿದ ಕಾರ್ಯಕ್ರಮವನ್ನು ಗ್ರಂಥಪಾಲಕ ಶ್ರೀ.ಮಾದೇಶ್‌ಗೌಡ.ಟಿ.ಎಂ ಸ್ವಾಗತಿಸಿ, ಕು.ಜ್ಯೋತಿ ವಂದಿಸಿದರು.


VIDYAVARDHAKA FIRST GRADE COLLEGE
"How to Inculcate Reading Habit"
Sri. SHASHIDHAR S
Dr. S MARIGOWDA
Dr. CHANDRASHEKARA M
Sri. MADESH GOWDA T M






VIDYAVARDHAKA FIRST GRADE COLLEGE
"How to Inculcate Reading Habit"


"How to Inculcate Reading Hab


VIDYAVARDHAKA FIRST GRADE
Inculcate Re


NATIONAL LIBRARIANS' DAY CELEBRATION
DR. S. R. RANGANATHAN




GPS Map Camera
Mysuru, Karnataka, India
8j9x+5h2, Medar Block, Mandi Mohalla,
Mysuru, Karnataka 570001, India
Lat 12.318166° Long 76.64875°
Wednesday, 12/08/2026 12:04 PM GMT +05:30
Google


THANK YOU!